# MANGALORE MARKET REPORTS

MMR MEDIA Since 1975



REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244



Vol.50 ENGLISH DAILY Subscription Yearly - Rs. - FRIDAY 9-6-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ಮಲೇಶಿಯನ್ ಪಾಮೆಣ್ಣೆ ದರ 4 ಶೇಕಡಾ ಹೆಚ್ಚಳ

ಪರ್ಯಾಯ ಖಾದ್ಯತೈಲಗಳ ದರ ಹೆಚ್ಚಳದಿಂದ ಮಲೇಶಿಯನ್ ಪಾಮೆಣ್ಣೆ ದರ 4 ಶೇಕಡಾ ಸಮೀಪ, ಟನ್‌ಗೆ 126 ರಿಂಗಿಟ್ಸ್ ಹೆಚ್ಚಳವಾಗಿ 3390 ರಿಂಗಿಟ್ಸ್ ($ 735.36) ಆಗಿದೆ.

### ಅಧಿಕ ಬೇಡಿಕೆ, ಭತ್ತ ಬೆಂಬಲ ಬೆಲೆ ಹೆಚ್ಚಳದಿಂದ ಭಾರತದ ಅಕ್ಕಿ ರಫ್ತು ದರ ಹೆಚ್ಚಳ

ಪೂರೈಕೆ ಇಳಿಕೆ, ಅಧಿಕ ಬೇಡಿಕೆ, ಭತ್ತಕ್ಕೆ ಕನಿಷ್ಠ ಬೆಂಬಲ ದರ ಹೆಚ್ಚಳದಿಂದ ಭಾರತ ಅಕ್ಕಿ ದರ 3 ತಿಂಗಳ ಗರಿಷ್ಠ ಮಟ್ಟಕ್ಕೆ ಹೆಚ್ಚಳವಾಗಿದೆ. ದರ ಟನ್‌ಗೆ $ 388 ರಿಂದ $ 395 ಕ್ಕೆ ಹೆಚ್ಚಳವಾಗಿದೆಯೆನ್ನಲಾಗಿದೆ. ಹಿಂದಿನ ತಿಂಗಳಿಂದ ಮಾರುಕಟ್ಟೆಯಲ್ಲಿ ಭತ್ತ ದರ ಹೆಚ್ಚಳವಾಗಿದೆಯೆನ್ನಲಾಗಿದೆ.

### ತೊಗರಿಬೇಳೆ ದರ ಹೆಚ್ಚಳದಲ್ಲಿರುವ ಸಾಧ್ಯತೆ

ಬೇಡಿಕೆಗಿಂತ ಉತ್ಪಾದನೆ ಬಹಳ ಇಳಿಕೆಯಿರುವುದರಿಂದ ಈ ವರ್ಷ ತೊಗರಿ, ತೊಗರಿಬೇಳೆ ದರ ಗಣನೀಯ ಹೆಚ್ಚಳ ಕಂಡಿದೆ. ಪ್ರಸ್ತುತ ಸಂಸ್ಕರಿಸದ ತೊಗರಿ ದರ ಕೆ.ಜಿ ಗೆ ರೂ.100 ದಾಟಿದೆಯೆನ್ನಲಾಗಿದೆ. ಮುಂದಿನ ಬೆಳೆಯ ಕಟಾವಾಗುವ ತನಕ ಮುಂದಿನ ಮೂರ್‍ನಾಲ್ಕು ತಿಂಗಳು ದರ ಹೆಚ್ಚಳದಲ್ಲೇ ಇರಬಹುದೆನ್ನಲಾಗಿದೆ. ದಾಸ್ತಾನು ಮಿತಿ ವಿಧಿಸಿದ ನಂತರ ದರ ಸ್ವಲ್ಪ ಮಟ್ಟಿನ ಇಳಿಕೆಯಾಗಿದ್ದರೂ, ದಾಸ್ತಾನು ಮಿತಿಯಿಂದ ದರದ ಮೇಲೆ ಹೆಚ್ಚಿನ ಪರಿಣಾಮವಾಗದೆನ್ನಲಾಗಿದೆ.

### ಗೋಧಿ ಸಾಕಷ್ಟು ದಾಸ್ತಾನಿದ್ದು, ಆಮದು ಸಾಧ್ಯತೆ ವಿರಳ

ಗೋಧಿ ದಾಸ್ತಾನು ಎಫ್.ಸಿ.ಐ, ವರ್ತಕರು ಹಾಗೂ ಕೃಷಿಕರಲ್ಲಿ ಸಾಕಷ್ಟಿದ್ದು, ಆಮದು ಮಾಡುವ ಸಾಧ್ಯತೆ ಕಡಿಮೆಯೆನ್ನಲಾಗಿದೆ. ಉತ್ಪಾದನೆ 112 ಮಿಲಿಯನ್ ಟನ್‌ಗಳಾಗಬಹುದೆಂದು ಸರಕಾರ ಅಂದಾಜಿಸಿದೆ. ಎಫ್.ಸಿ.ಐ ನಲ್ಲಿ ಜೂನ್ 3 ರ ವೇಳೆಗೆ 26.2 ಮಿಲಿಯನ್ ಟನ್ ಖರೀದಿ ಸಹಿತ 31.2 ಮಿಲಿಯನ್ ಟನ್ ದಾಸ್ತಾನಿದೆಯೆನ್ನಲಾಗಿದೆ. ಆಹಾರ ಭದ್ರತೆಯನ್ನು ಇರಬೇಕಾದ 18.4 ಮಿಲಿಯನ್ ಟನ್‌ಗಳಿಗಿಂತ ಸಾಕಷ್ಟು ಅಧಿಕವಿದೆ. ಸರಕಾರಿ ಏಜೆನ್ಸಿಗಳೊಂದಿಗೆ, ಖಾಸಗಿ ವರ್ತಕರೂ ಸಾಕಷ್ಟು ಖರೀದಿ ಮಾಡಿದ್ದು, ರೈತರಲ್ಲೂ ಸಾಕಷ್ಟು ದಾಸ್ತಾನಿದೆಯೆನ್ನಲಾಗಿದೆ. ಆದರೂ ಕೆಲವು ವರ್ತಕರು ಗೋಧಿ ಲಭ್ಯತೆ ಬೇಡಿಕೆಗಿಂತ ಕಡಿಮೆಯಾಗಬಹುದೆಂಬ ಸುದ್ದಿ ಹಬ್ಬಿಸುತ್ತಿದ್ದಾರೆನ್ನಲಾಗಿದೆ. ಅವರು ದರ ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆನ್ನಲಾಗಿದೆ. ದಾಸ್ತಾನು ಸಾಕಷ್ಟಿರುವುದರಿಂದ ಆಮದು ಸಾಧ್ಯತೆ ವಿರಳವೆನ್ನಲಾಗಿದೆ.